



# ಪ್ರವ್ರಾಜಿಕಾ ಭಾರತೀಪ್ರಾಣಾ

ಪಾರ್ವತಮ್ಮ ಚಂದ್ರಣ್ಣ

ಪ್ರವ್ರಾಜಿಕಾ ಭಾರತೀಪ್ರಾಣಾ ಅವರು ಶ್ರೀಶಾರದಾಮಠದ ಸಂಸ್ಥಾಪಕ ಅಧ್ಯಕ್ಷರು. ಈ ಪುಸ್ತಕದಲ್ಲಿ ಅವರ ಸ್ಮರಣ ಸಮುಚ್ಚಯವನ್ನು ಕಾಣುತ್ತೇವೆ. ಅವರು ತಮ್ಮ ನೆನಪಿನ ಸುರಳಿ ಬಿಚ್ಚಿದಂತೆಲ್ಲ, ಅವರ ದಿವ್ಯಜೀವನದ ದರ್ಶನವಾಗುತ್ತ ಹೋಗುತ್ತದೆ. ೧೨ನೆಯ ವಯಸ್ಸಿನಲ್ಲಿಯೇ ತಂದೆತಾಯಿಯರು ಅವರ ಮದುವೆ ಮಾಡಿದ್ದು, ವೈವಾಹಿಕ ಜೀವನವನ್ನು ಅವರು ತಿರಸ್ಕರಿಸಿ ಮನೆ ಬಿಟ್ಟು ಶ್ರೀಮಾತೆ ಶಾರದಾದೇವಿಯವರ ಆಶ್ರಯವನ್ನು ಪಡೆದಿದ್ದು, ಮುಂದೆ ನಿವೇದಿತಾ ಸ್ಥಾಪಿಸಿದ ಶಾಲೆಯಲ್ಲಿ ವಾಸ್ತವ್ಯ ಮಾಡಿ ಸೇವೆಗೈದದ್ದು, ದೈವೀಭಾವದ ಆಕರ್ಷಣೆಯಿಂದಾಗಿ ಅವರು ಸಾಧಕಿಯಾದದ್ದು, ಈ ದಾರಿಯಲ್ಲಿ ಅವರು ಅನುಭವಿಸಿದ ಕಷ್ಟಗಳು, ಅವರು ದೃಢಮನಸ್ಸಿನಿಂದ ಧೈರ್ಯವಾಗಿ ಹಲವಾರು ರೀತಿಯ ಅಪಮಾನ ಮತ್ತು ಅವಹೇಳನಗಳನ್ನು ಎದುರಿಸಿದ್ದು – ಇವೆಲ್ಲವೂ ಕಣ್ಣ ಮುಂದಿನ ಚಿತ್ರಪಟದಲ್ಲಿ ಕಾಣತೊಡಗುತ್ತವೆ.

ಸರಳಾದೇವಿ ಎನ್ನುವುದು ಅವರ ಹಿಂದಿನ ಹೆಸರು. ಅವರು ಶ್ರೀಮಾತೆಯವರ ಅಂತಿಮ ದಿನಗಳಲ್ಲಿ ತೋರಿದ ಆಸ್ಥೆ, ಪ್ರೇಮದಿಂದ ಮಾಡಿದ ಸೇವೆ ಹೃದಯಂಗಮವಾದುದು. ಯೋಗಿನ್‌ಮಾರ ಇಚ್ಛೆಯಂತೆ ಸ್ವಾಮಿ ಶಾರದಾನಂದರು ಸರಳಾದೇವಿಗೆ ಕಾವಿಯ ಉತ್ತರೀಯವನ್ನು ಕರುಣಿಸಿ, 'ಶ್ರೀ ಭಾರತೀ' ಎಂಬ ನಾಮಧೇಯವನ್ನು ನೀಡಿದರು. ಆತ್ಮೀಯವಾಗಿ ಮಗಳಂತೆ ಅವರನ್ನು ಕಾಣುತ್ತ, "ಇಲ್ಲಿಯವರೆಗೆ ಶ್ರೀಮಾತೆಯವರನ್ನು ಮಾನವೀರೂಪದಲ್ಲಿ ಪೂಜಿಸಿದೆ. ಇನ್ನು ಅವರ ನಿಜಸ್ವರೂಪವನ್ನು ಅರ್ಥಮಾಡಿಕೊ. ಇತರರಿಗೆ ಆದರ್ಶವಾಗಿ ಬಾಳಿ ಭಗವಂತನ ಸಾಕ್ಷಾತ್ಕಾರ ಮಾಡಿಕೋ" ಎಂದು ಹರಿಸಿದರು. ಅನಂತರ ೧೯೨೭ರಿಂದ ೧೯೫೪ರವರೆಗೆ ಸತತವಾಗಿ ೨೭ ವರ್ಷಗಳ ಕಾಲ ಸರಳಾದೇವಿ ವಾರಾಣಸಿಯಲ್ಲಿ ತಪಸ್ಯೆಯ ಜೀವನವನ್ನು ನಡೆಸಿದರು.




**ಸಂಪಾದಕರು :** ಪ್ರವ್ರಾಜಿಕಾ ನಿರ್ಭಯಪ್ರಾಣಾ
**ಅನುವಾದಕರು :** ಕುಮಾರಿ ಸ್ವರ್ಣಗೌರಿ
**ಪ್ರಕಾಶಕರು :** ಶ್ರೀಶಾರದಾ ಮಠ
ನಂ.೪೪/೨, ನಂದಿದುರ್ಗ ರಸ್ತೆ
ಬೆಂಗಳೂರು – ೫೬೦ ೦೪೬
**ಪುಟಗಳು :** ೩೪೬ ; **ಬೆಲೆ :** ರೂ.೯೦/–

ಸ್ವಾಮಿ ವಿವೇಕಾನಂದರು ಕನಸು ಕಂಡಂತೆ, ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕೆಂದು ಬೇಲೂರು ರಾಮಕೃಷ್ಣ ಮಠದ ಹಿರಿಯ ಸ್ವಾಮೀಜಿಗಳು ನಿರ್ಧರಿಸಿದರು. ಅದರಂತೆ ಶ್ರೀಶಾರದಾಮಠವು ೧೯೫೪ರಲ್ಲಿ ಸ್ಥಾಪನೆಯಾಯಿತು. ಶ್ರೀಭಾರತೀ ತಮ್ಮ ೬೦ನೆಯ ವಯಸ್ಸಿನಲ್ಲಿ ಕಾಶಿಯನ್ನು ತೊರೆದು ಕೊಲ್ಕತ್ತೆಗೆ ಬಂದು, ಶ್ರೀಶಾರದಾಮಠದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ತಾವು ಶ್ರೀಮಾತೆಯವರೊಡನಿದ್ದು ಏನನ್ನು ಕಲಿತರೋ, ಅದನ್ನೇ ಎಲ್ಲ ಭಕ್ತೆಯರಿಗೂ ಪ್ರೇಮ ಮತ್ತು ಆತ್ಮೀಯ ಭಾವದಿಂದ ಧಾರೆ ಎರೆದರು. ೧೯೭೩ರವರೆಗೆ ಶ್ರೀಶಾರದಾಮಠದ ಅಧ್ಯಕ್ಷರಾಗಿದ್ದರು. ಅವರಿಂದ ದೀಕ್ಷೆ ಪಡೆದ ಅನೇಕ ಭಕ್ತೆಯರು ಆಧ್ಯಾತ್ಮಿಕ ಜೀವನ ನಡೆಸಲು ಸ್ಫೂರ್ತಿ ಪಡೆದರು. ತಮ್ಮ ಕಡೆಯಕಾಲದಲ್ಲಿ, ಹಲವಾರು ತಿಂಗಳುಗಳ ಕಾಲ ಅಪಾರ ದೈಹಿಕ ನೋವನ್ನು ಮೌನವಾಗಿ ಸಹಿಸಿ, ತಮ್ಮ ಮನಸ್ಸನ್ನು ಎಲ್ಲ ಪ್ರಾಪಂಚಿಕ ಆಲೋಚನೆಗಳಿಂದ ಮುಕ್ತಗೊಳಿಸಿ, ಪರಬ್ರಹ್ಮನಲ್ಲಿ ಲೀನವಾದರು. ಇದು ಸಂಕ್ಷಿಪ್ತವಾಗಿ ಈ ಪುಸ್ತಕದ ವಸ್ತುವಿಷಯ.


ಪ್ರವ್ರಾಜಿಕಾ ನಿರ್ಭಯಪ್ರಾಣಾ ಅವರು ಮೂಲ ಬಂಗಾಳಿ ಭಾಷೆಯಲ್ಲಿ ರಚಿಸಿರುವ ಈ ಕೃತಿಯನ್ನು ಪ್ರವ್ರಾಜಿಕಾ ಆತ್ಮಪ್ರಾಣಾ ಎಂಬ ಸಂನ್ಯಾಸಿನಿ ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ಎರಡನ್ನೂ ನಿಕಟವಾಗಿ ಅನುಸರಿಸಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಕುಮಾರಿ ಸ್ವರ್ಣಗೌರಿಯವರು ಇದನ್ನು ಕನ್ನಡಕ್ಕೆ ಅನುವಾದ ಮಾಡಿರುವುದು, ಕನ್ನಡನಾಡಿನ ಭಕ್ತರಿಗೆ ಅಮೂಲ್ಯವಾದ ಕಾಣಿಕೆ ಇತ್ತಂತಾಗಿದೆ. ಅವರು ಭಾಷಾಂತರ ಮಾಡಿರುವ ಶೈಲಿ ತುಂಬ ಸೊಗಸಾಗಿದೆ. ಇದು ಅಕ್ಷರಶಃ ಭಾಷಾಂತರವಾಗದೆ, ಸಹಜವಾದ ಸರಳವಾದ ಭಾಷೆಯಲ್ಲಿ ಇರುವುದರಿಂದ, ಆಸಕ್ತ ಓದುಗರಿಗೆ ಅತ್ಯಂತ ಸುಲಭಗ್ರಾಹ್ಯವಾಗಿದೆ. ಈ ದೃಷ್ಟಿಯಲ್ಲಿ ಕುಮಾರಿ ಸ್ವರ್ಣಗೌರಿಯವರ ಕಾರ್ಯ ಅತ್ಯಂತ ಶ್ಲಾಘನೀಯವಾದುದು. ಶ್ರೇಷ್ಠ ಮಹಿಳಾ ಸಂತರ ಉನ್ನತ ವ್ಯಕ್ತಿತ್ವವನ್ನು ಕುರಿತು ಪ್ರಕಟವಾಗಿರುವ ಹಲವಾರು ಶ್ರೇಷ್ಠ ಕನ್ನಡ ಗ್ರಂಥಗಳ ಸಾಲಿನಲ್ಲಿ ಇದೂ ಒಂದು ಎನ್ನುವುದರಲ್ಲಿ ಎರಡು ಮಾತಿಲ್ಲ.

ಬಂಗಾಳದ ಯಾವುದೋ ಒಂದು ಮೂಲೆಯ ಹಳ್ಳಿಯಲ್ಲಿ ಜನಿಸಿದ ಒಬ್ಬ ಹುಡುಗಿ, ಸೋದರಿ ನಿವೇದಿತಾ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದು, ಸಮರ್ಪಣಾಭಾವದಿಂದ ಶ್ರೀಮಾತೆಯವರ ಸೇವಾಕೈಂಕರ್ಯವನ್ನು ಕೈಗೊಳ್ಳುತ್ತಾಳೆ. ಕಾಲಾಂತರದಲ್ಲಿ ಶ್ರೇಷ್ಠ ಆಧ್ಯಾತ್ಮಿಕ ಸಾಧಕಿಯರ ಸಂಪರ್ಕಕ್ಕೆ ಬಂದು ಒಬ್ಬ ಮಹಾನ್ ಆಧ್ಯಾತ್ಮಿಕ ಸಂತರಾಗಿ ರೂಪುಗೊಳ್ಳುತ್ತಾರೆ. ಮುಂದೆ ವಾರಾಣಸಿಯಲ್ಲಿ ತಪಸ್ಸಿನ ಜೀವನವನ್ನು ನಡೆಸುತ್ತಾರೆ. ತಮ್ಮ ಜೀವನದ ಅಂತಿಮ ವರ್ಷಗಳಲ್ಲಿ ಶ್ರೀಶಾರದಾಮಠದ ಮೊದಲ ಅಧ್ಯಕ್ಷರಾಗಿ, ತಮ್ಮ ತ್ಯಾಗ, ಶರಣಾಗತಿಗಳ ಅನನ್ಯಭಾವದಿಂದ ನೂರಾರು ಭಕ್ತಮಹಿಳೆಯರ ಆಧ್ಯಾತ್ಮಿಕ ಉನ್ನತಿಗಾಗಿ ಹಲವಾರು ರೀತಿಯಿಂದ ಶ್ರಮಿಸುತ್ತಾರೆ. ಅಮೂಲ್ಯವಾದ ಗ್ರಂಥರೂಪದಲ್ಲಿ ಇವೆಲ್ಲವೂ ಕನ್ನಡದ ಭಕ್ತ ಓದುಗರಿಗೆ ಲಭ್ಯವಾಗಿರುವುದು ನಿಜಕ್ಕೂ ಒಂದು ಸೌಭಾಗ್ಯವೇ ಸರಿ.

# ವಿವೇಕಾನಂದಮಯ ವಿಶ್ವಕವಿ

# ಕುವೆಂಪು

**ವಾಗೀಶ್ವರಿ**



**ವಿಶ್ವಕವಿ ಕುವೆಂಪು ಅವರ ಮೇಲೆ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಬೀರಿದ ಪ್ರಭಾವ ಗಾಢವಾದುದು. ಅದರ ಹಲವು ಮಜಲುಗಳನ್ನು, ಸುಮನೋಹರ ನಿದರ್ಶನಗಳ ಮೂಲಕ ಹೃದಯಂಗಮವಾಗಿ ಬಣ್ಣಿಸಿರುವ ಲೇಖಕಿ ಶೃಂಗೇರಿ ಸಮೀಪದ ಜಯಪುರದವರು; ಶ್ರೀರಾಮಕೃಷ್ಣ ಆಶ್ರಮದ ಭಕ್ತರು.**

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಸಂಚರಿಸುತ್ತಾ ಭಾರತದ ನೆಲದ ಮೇಲೆ ಇಟ್ಟ ಒಂದೊಂದು ಹೆಜ್ಜೆಯೂ ದೇಶದ ಭವಿಷ್ಯವನ್ನು ಉಜ್ವಲಗೊಳಿಸುವ 'ವಿದ್ಯುತ್‌ಕೇಂದ್ರ' ವಾಯಿತು; ಭಾರತದ ಸುಪ್ತ ಆಧ್ಯಾತ್ಮಿಕ, ಸಾಂಸ್ಕೃತಿಕ ಶಕ್ತಿಯನ್ನು ಜಾಗೃತಗೊಳಿಸಿತು. ಅವರು ಈ ನೆಲದಲ್ಲಿ ಬಿತ್ತಿದ ವಿಚಾರಬೀಜಗಳು ಇಂದು ಮಹಾವೃಕ್ಷಗಳಾಗಿ ಫಲ ತುಂಬಿ ತೂಗಾಡುತ್ತಿವೆ. 'ರಾಷ್ಟ್ರ ಕುಂಡಲಿನಿಯನ್ನು ಜಾಗೃತಗೊಳಿಸಿದ, ರಾಷ್ಟ್ರೀಯತೆಯ ಕಲ್ಪನೆಗೆ ಹೊಸ ಆಯಾಮ ತೋರಿಸಿದ' ವಿವೇಕಾನಂದರ ಸಿಂಹಗರ್ಜನೆ, 'ಮಿಂಚು ಸಿಡಿಲುಗಳನ್ನು ಪುಡಿಮಾಡಿ ಸಿಡಿಮದ್ದಿನ ಮೇಲೆ ಎರಚಿದಂತೆ' ಭರತಭೂಮಿಯನ್ನು ಅಪ್ಪಳಿಸಿತು. ಆ ದಿವ್ಯಕಂಪನದಿಂದ ಮೂಡಿಬಂದ ಒಂದು ಮಹಾಚೇತನವೇ ಕುವೆಂಪು.

ಪ್ರಕೃತಿಸೌಂದರ್ಯದ ನೆಲವೀಡಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡು ಬೆಟ್ಟಗಳ ನಡುವೆ ಇದ್ದ ಕುಪ್ಪಳಿಯಲ್ಲಿ ಜನಿಸಿದ ಕುವೆಂಪು, ಮುಂದೆ ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಾರೆ. ಪಬ್ಲಿಕ್ ಲೈಬ್ರರಿಯಲ್ಲಿ ಒಮ್ಮೆ ಪುಸ್ತಕವೊಂದನ್ನು ಹುಡುಕುತ್ತಿದ್ದಾಗ ಅದು ಅವರ ಜೀವನ ದಿಕ್ಕನ್ನೇ ತಿರುಗಿಸಿ, "ಬದುಕನ್ನೆಲ್ಲಾ ಮರ್ತ್ಯದಿಂದ ಅಮರ್ತ್ಯಕ್ಕೆ ಬೀಸಿದ ಭಗವತ್ ಕೃಪಾರೂಪವಾದ ಶ್ರೀರಾಮಕೃಷ್ಣ ವಿವೇಕಾನಂದ ವಿಷಯಕವಾದ ಕೃತಿಶ್ರೇಣಿಯ ದರ್ಶನವಾಯಿತು" ಎಂದು ಅವರು ಬರೆಯುತ್ತಾರೆ. ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಕುವೆಂಪುರವರ ಜೀವನದ 'ದಿವ್ಯ ಅಧ್ಯಾಯ'ದ ಪುಟಗಳನ್ನು ತೆರೆಯಿತು. ದಿವ್ಯ ಗುರುಚೇತನಗಳ ಪಾದಾರವಿಂದಗಳನ್ನು ಅಪ್ಪಿ ಹಿಡಿದು ತಾವು ಮುಂದುವರಿದದ್ದನ್ನೂ, ಗುರುಕೃಪೆ ತಮ್ಮನ್ನು ನಿರಂತರವಾಗಿ ಕೈಹಿಡಿದು ಕಾಪಾಡಿ ಮುನ್ನಡೆಸಿದ್ದನ್ನೂ ಕುವೆಂಪು ತಮ್ಮ ಆತ್ಮಕಥೆ 'ನೆನಪಿನ ದೋಣಿ'ಯಲ್ಲಿ ದಾಖಲಿಸಿದ್ದಾರೆ.

ಕುವೆಂಪುರವರ ಆಧ್ಯಾತ್ಮಿಕ ತಾಕಲಾಟಗಳನ್ನೂ, ಕೋರಿಕೆಗಳನ್ನೂ, ಆಶಯಗಳನ್ನೂ, ಪ್ರಾರ್ಥನೆಗಳನ್ನೂ ಈ ಗ್ರಂಥದ ಉದ್ದಕ್ಕೂ ನೋಡಬಹುದು. ಅವರಿಗೆ ಸ್ವಾಮಿ ವಿವೇಕಾನಂದರಲ್ಲಿದ್ದ ಪೂಜ್ಯಭಾವನೆ ಪ್ರತಿಪುಟದಲ್ಲಿಯೂ ಪ್ರಕಟವಾಗಿದೆ. ಅವರ ದಿನಚರಿಯನ್ನು ಮೊದಮೊದಲು ಶ್ರೀಕೃಷ್ಣ, ಮಾತೆ, ಸ್ವಾಮಿ ವಿವೇಕಾನಂದ ಎಂದು ಮುಗಿಸುತ್ತಿದ್ದರು. ಮುಂದೆ ಮಾತಿನಲ್ಲಿ, ಮನದಲ್ಲಿ ಸ್ವಾಮಿ ವಿವೇಕಾನಂದರೇ ತುಂಬಿರುತ್ತಿದ್ದರು. ಸ್ವಾಮಿ ವಿವೇಕಾನಂದರ ಹೆಸರು ಹೇಳಿದರೆ ಅವರಿಗೆ ವಿದ್ಯುತ್ ಸಂಚಾರವಾಗುತ್ತಿತ್ತು! ಸ್ವಾಮಿ ವಿವೇಕಾನಂದರ ಜೀವನ, ಉಪದೇಶ, ದರ್ಶನ, ಅವರ ದಿವ್ಯ ಹೃದಯ – ಇವೇ ಕುವೆಂಪು ಅವರ ಮಾತಾಯ್ತು. "ಅವರನ್ನು ಕುರಿತು ಮಾತನಾಡುವುದೆಂದರೆ ಜೀವ ಆನಂದಮಯವಾಗುತ್ತಿತ್ತು" ಎಂದು ಹೇಳುವ ಕುವೆಂಪುರವರನ್ನು ವಿವೇಕಾನಂದರು ಸಂಪೂರ್ಣವಾಗಿ ಆವರಿಸಿಕೊಂಡಿದ್ದರು. ಕುವೆಂಪು ಬರೆಯುತ್ತಾರೆ, "ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿ ಕಿರುದೊರೆಯಾಗಿ ಹುಟ್ಟಿ, ಗಿರಿವನ ಕಂದರಗಳಲ್ಲಿ ಹರಿದುಬಂದ ನನ್ನ ಜೀವನ ತರಂಗಿಣಿ ಶ್ರೀಗುರುಕೃಪೆಯ ಮಹಾನದಿಯ ಗಂಗಾಪ್ರವಾಹಕ್ಕೆ ಸಂಗಮಿಸಿತು." ಅಧ್ಯಾತ್ಮ ಗಗನದ ಉಜ್ವಲ ನಕ್ಷತ್ರದ ಸಂಪರ್ಕದಿಂದ ಕುವೆಂಪುರವರ ಜೀವಾತ್ಮ ಅಂಬರಗಾಮಿಯಾಯಿತು. ಅವರೇ ಹೇಳುವಂತೆ, ಪ್ರಜ್ಞೆಯಲ್ಲಿ ಪರಿವರ್ತನೆ ನಡೆದಿತ್ತು. ಜೀವನದಲ್ಲಿ ತಾವೇರಿರುವ ಎತ್ತರಕ್ಕೆ ಗುರುಕೃಪೆಯೇ ಕಾರಣ ಎಂದು ಕುವೆಂಪು ವಿನಮ್ರರಾಗಿ ಹೀಗೆ ನೆನೆಯುತ್ತಾರೆ:

**ಶ್ರೀ ಗುರುದೇವನಿಗೆರಗುವೆನು**
**ಗುರುಚರಣದಲಿ ನಾ**
**ಕರಗುವೆನು!**

(*ಕಬ್ಬಿಗನ ಕೈ ಬುಟ್ಟಿ*)

'ಸ್ವಾಮಿ ವಿವೇಕಾನಂದ' – ಈ ಹೆಸರು ಕುವೆಂಪುರವರ ಬದುಕು ಬರಹಗಳಿಗೆ ಶಕ್ತಿಕೊಡುವ 'ದಿವ್ಯಮಂತ್ರ'. ಸ್ವಾಮೀಜಿಯವರ ಜೀವನದಿಂದ ಸ್ಫೂರ್ತಿ ಪಡೆದು ಕುವೆಂಪು ರಚಿಸಿದ ಕವನ 'ಶ್ರೀ ವಿವೇಕಾನಂದ ಸಂಭೂತಿ'. ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರ ಜನ್ಮರಹಸ್ಯವನ್ನು ಸಮಾಧಿಸ್ಥಿತಿಯಲ್ಲಿ ಕಂಡಿದ್ದರು. ಆ ದರ್ಶನ ಕುವೆಂಪುರವರಲ್ಲಿ ಈ ಕೆಳಗಿನ ಕವನವಾಗಿ ಮೂಡಿಬಂದಿದೆ:

**ಇದ್ದನು ಸಮಾಧಿ ನಿರ್ವಿಕಲ್ಪಂ ನರಮಹರ್ಷಿ**
**ಅಲ್ಲಿ ಶಶಿ ಸೂರ್ಯರಿಗೆ ಹಗಲಿಲ್ಲ; ತಾರಾಕೋಟಿ**
**ದೂರದೊಳೆ ನಿಂತಿಹವು, ಹೋಗಲಾರದೆ ದಾಟಿ,**
**ಕಾಲ್ನೋತು! – ಆ ದಕ್ಷಿಣೇಶ್ವರ ಸುದೂರದರ್ಶಿ**
**ತಾಂ ಧ್ಯಾನ ಪಥದಿಂದೇರಿ,**
**ನಿರ್ವಿಕಲ್ಪ ಸಮಾಧಿಯೋಗದಿಂದಿರ್ದೆಡೆಗೆ!**
**ಶಿಶುರೂಪಮಂ ತಾಳುತ ಘನೀಭೂತ ಜ್ಯೋತಿ**
**ಋಷಿಯ ಕೊರಳಂ ತನ್ನ ನಳಿದೋಳ್ಗಳಿಂದಪ್ಪಿ**
**'ಇಳಿದು ಬಾ ನನ್ನೊಡನೆ!' ಆ ಕರೆಗುಣ್ಮಿದಾ ಪ್ರೀತಿ**
**ಧರೆಗವತರಿಸಿತಯ್ ಈ ನರೇಂದ್ರ ರೂಪಿಂದೊಪ್ಪಿ** (*ಕೃತ್ತಿಕೆ*)

ದಿವ್ಯ ಮಹಾಚೇತನಗಳ ಅಯಸ್ಕಾಂತೀಯ ಶಕ್ತಿಯಿಂದ ಸೆಳೆಯಲ್ಪಟ್ಟ ಮಹಾಕವಿಯ ಜೀವನದ ಪ್ರಮುಖಕಾಲದಲ್ಲಿ ಅವರಿಗೆ ಆಶ್ರಯಕೊಟ್ಟು ಸಲಹಿದ್ದು 'ಶ್ರೀರಾಮಕೃಷ್ಣ ಆಶ್ರಮ.' ಅವರು ಮೊದಲು ಆಶ್ರಮದ ಸಂಪರ್ಕಕ್ಕೆ ಬಂದಿದ್ದು ಸ್ವಾಮೀಜಿಯವರ ಜನ್ಮೋತ್ಸವ ಸಮಾರಂಭದಲ್ಲಿ. ಆಶ್ರಮದಿಂದ ಹಾಸ್ಟೆಲ್ಲಿಗೆ ಹಿಂತಿರುಗಿದ ನಂತರ ಕುವೆಂಪು ರಚಿಸಿದ ಕವನದ ಹೆಸರು 'ಸ್ವಾಮಿ ವಿವೇಕಾನಂದ'. ಮುಂದೆ ಆಶ್ರಮಕ್ಕೆ ಭೇಟಿ ನೀಡಿ, ಸ್ವಾಮಿ ಸಿದ್ಧೇಶ್ವರಾನಂದರನ್ನು ಸಂದರ್ಶಿಸಿದ ನಂತರ ಕುವೆಂಪು ಹೀಗೆ ಬರೆಯುತ್ತಾರೆ: "ನನ್ನ ಬದುಕಿನ ಕಿರುದೊರೆ ಒಂದು ವಿಶ್ವಜೀವವಾಹಿನಿಯನ್ನು

ಸಂಧಿಸಿ ಸಂಗಮಿಸಿದ ಪವಿತ್ರ ವರ್ಷ, ಅದು ಕ್ರಾಂತಿಕಾರಿ ಪರಿವರ್ತನೆಯ ವರ್ಷ." ಹೀಗೆ ಸ್ವಾಮಿ ಸಿದ್ಧೇಶ್ವರಾನಂದರಿಂದ ತಮ್ಮ ಸಾಹಿತ್ಯಕ ರಸಸಾಹಸಕ್ಕೆ ಸಿಕ್ಕ ಸ್ಫೂರ್ತಿ ಮತ್ತು ಉತ್ತೇಜನಗಳನ್ನು ಕವಿ ವಿನಮ್ರರಾಗಿ ನೆನೆಯುತ್ತಾರೆ.

ವಿದ್ಯಾರ್ಥಿಯಾಗಿದ್ದಾಗ ಕುವೆಂಪು ಒಮ್ಮೆ ತೀವ್ರವಾಗಿ ಅನಾರೋಗ್ಯಪೀಡಿತರಾಗುತ್ತಾರೆ. ಸ್ವಾಮಿ ಸಿದ್ಧೇಶ್ವರಾನಂದರು ಅವರನ್ನು ಆಸ್ಪತ್ರೆಗೆ ಸಾಗಿಸಿ, ಗುಣಮುಖರಾದ ನಂತರ ಆಶ್ರಮಕ್ಕೆ ಕರೆತರುತ್ತಾರೆ. ಮಾತೃಹೃದಯದ ಸ್ವಾಮೀಜಿಯವರ ಆರೈಕೆಯ ಕೃಪೆ ತಮ್ಮ "ದಿಕ್ಕಿಲ್ಲದ ಚೇತನಕ್ಕೆ ದಿಕ್ಕಾಗಿ ಆತುಕೊಂಡಿತು" ಎಂದು ಕುವೆಂಪು ನೆನೆಯುತ್ತಾರೆ. ಅವರು ಹೀಗೆ ಬರೆಯುತ್ತಾರೆ: "ನಾನು ಯಾರನ್ನು ನನ್ನ ಅಮ್ಮ, Mother Divine ಎಂದು ಸಂಬೋಧಿಸುತ್ತಿದ್ದೆನೋ ಆಕೆಯೇ ಶ್ರೀರಾಮಕೃಷ್ಣಾಶ್ರಮದ ರೂಪದಲ್ಲಿ ನನ್ನ ಕೃಪೆಯ ತೋಳು ನೀಡಿ, ಕರೆಕರೆದಲೆಯುತ್ತಿದ್ದ ತನ್ನ ಕಂದನನ್ನು ತನ್ನ ದಿವ್ಯರಕ್ಷೆಯ ವೃಕ್ಷಕ್ಕೆ ಎತ್ತಿಕೊಂಡಳು" ಎಂದು. ಮುಂದೆ ಹತ್ತು ವರ್ಷಗಳ ಕಾಲ ಮೈಸೂರಿನ ರಾಮಕೃಷ್ಣ ಆಶ್ರಮವೇ ಕುವೆಂಪುರವರ ಜೀವನ ಮತ್ತು ಸಾಹಿತ್ಯ ರೂಪುಗೊಳ್ಳಲು ಮತ್ತು ರಕ್ಷಿಸಲು ಕಾರಣವಾಯಿತು.

ಕುವೆಂಪುರವರ ಪಾಲಿಗೆ ಶ್ರೀರಾಮಕೃಷ್ಣ ಆಶ್ರಮವೇ ಸಕಲ ತೀರ್ಥಕ್ಷೇತ್ರ. ಅವರ ಜೀವನದಲ್ಲಿ ಶ್ರೀರಾಮಕೃಷ್ಣ ಆಶ್ರಮದ ಪಾತ್ರ ಎಷ್ಟು ಮಹತ್ವದ್ದೆನ್ನುವುದು ಅವರ ಬರಹಗಳನ್ನು ನೋಡಿದಾಗ ಗೊತ್ತಾಗುತ್ತದೆ. ಆ ಕವಿಚೇತನಕ್ಕೆ ಆಶ್ರಮಕ್ಕೆ ಹೋಗುವುದೇ ಒಂದು ಆಧ್ಯಾತ್ಮಿಕ ತೀರ್ಥಯಾತ್ರೆ ಎನಿಸುತ್ತಿತ್ತು. ತಮ್ಮ ದೊಡ್ಡ ಕಾರನ್ನು ಆಶ್ರಮದ ಬದಿಯಲ್ಲಿ ನಿಲ್ಲಿಸಿ, ನಿಧಾನವಾಗಿ ಹೆಜ್ಜೆ ಇಡುತ್ತಾ, ಪ್ರತಿ ಹೆಜ್ಜೆ ಇಡುವಾಗಲೂ ಆಶ್ರಮದ ಪಾವಿತ್ರ್ಯವನ್ನು ಆನಂದಿಸಿ ಅನುಭವಿಸುತ್ತಾ ಮುಂದುವರಿಯುತ್ತಿದ್ದ ಕುವೆಂಪುರವರನ್ನು ನೋಡಿದಾಗ ತಿಳಿಯುತ್ತಿತ್ತು, ಕುವೆಂಪುರವರ ಜೀವನದಲ್ಲಿ ಆಶ್ರಮ ಎಷ್ಟು ಪೂಜನೀಯ ಸ್ಥಾನದಲ್ಲಿದೆ ಎಂಬುದು.

'ಕವಿಯ ಮನೆಯ ಅಂಗಳ ದಿವಿಜರಿಗೂ ಮಂಗಳ'ವಂತೆ. ಮನೆಯಂಗಳದ ಅವರ ಹೂದೋಟದಲ್ಲಿ ಸುಂದರ ಹೂವುಗಳು ಅರಳಿದಾಗ, ಕುವೆಂಪುರವರಿಗೆ ಮತ್ತು ಅವರ ಶ್ರೀಮತಿಯಾದ ಹೇಮಾವತಿಯವರಿಗೆ ನೆನಪಾಗುತ್ತಿದ್ದದ್ದು ಶ್ರೀರಾಮಕೃಷ್ಣ ಆಶ್ರಮವೇ.

**ಬೆಳ್ಳಿ ಬಿಳಿ ಕಲಶ ಶಿಶು ಬಾಯ್‌ದುಟಿಯ ತೆರವಂತೆ**
**ಅಲರುತಿದೆ ಮೂರುಲೋಕದ ಮೋಹ ಕರೆವಂತೆ**

ಅದರಲ್ಲಿಯೂ, 'ಮ್ಯಾಗ್ನೋಲಿಯಾ ಗ್ರಾಂಡಿಫ್ಲೋರಾ' ಎಂಬ ಸುಂದರ ಹೂವು ಅರಳಿದಾಗ ಅದನ್ನು ಅವರು ಮೊದಲು ಕೊಡುತ್ತಿದ್ದುದು ಆಶ್ರಮಕ್ಕೆ; ದಿವ್ಯತ್ರಯರಿಗೆ ಅರ್ಪಿಸಲು ಹೂಗಳನ್ನು ಕೊಟ್ಟಾಗ ಅವರಲ್ಲಿರುತ್ತಿದ್ದುದು ಧನ್ಯತೆ, ತೃಪ್ತಿ.

ತಮ್ಮ ಬರಹಗಳ ಮೂಲಕ ಸ್ವಾಮಿ ವಿವೇಕಾನಂದರನ್ನು ಕನ್ನಡನಾಡಿಗೆ ಕುವೆಂಪು ಪರಿಚಯಿಸಿದರು. ಹಾಗೆಯೇ ತಾವು ಹುಟ್ಟಿ ಬೆಳೆದ ಮಲೆನಾಡಿಗೆ ಶ್ರೀರಾಮಕೃಷ್ಣ – ವಿವೇಕಾನಂದರ ವಿಚಾರಗಳನ್ನು ತಿಳಿಸಿಕೊಡಲೂ ಪ್ರಯತ್ನಿಸಿದರು. ಈ ವಿಚಾರವಾಗಿ 'ನೆನಪಿನ ದೋಣಿ' ಯಲ್ಲಿ ಹೀಗೆ ಬರೆಯುತ್ತಾರೆ: "ನಾನು ಊರಿಗೆ ಹೋದಾಗ, ಕಾಡುದಾರಿಯಲ್ಲಿ ಸಾಗುತ್ತಾ...... ಪರಮಹಂಸರ ವಿಚಾರವಾಗಿ ಅನೇಕ ವಿಷಯಗಳನ್ನು ತಿಳಿಸಿದೆ. ಮತ್ತು ಸಮಯಾವಕಾಶವಾದಾಗಲೆಲ್ಲಾ ಸ್ವಾಮೀಜಿಯವರ ವಿಚಾರಗಳನ್ನು ತಿಳಿಸಲು ಪ್ರಯತ್ನಿಸುತ್ತಿದ್ದೆ."

ಸುಂದರ ಕವನವೊಂದರಲ್ಲಿ ತಮ್ಮ ಗುರುದೇವರನ್ನು ಕುವೆಂಪು ಮಲೆನಾಡಿಗೆ ಆಹ್ವಾನಿಸಿದ್ದಾರೆ:

**ಬಾ ಶ್ರೀಗುರುದೇವನೆ ಬಾ!**
**ಶ್ಯಾಮಲಕಾನನ ಶೃಂಗತರಂಗಿತ**
**ಸಹ್ಯಾದ್ರಿಯ ಸುಂದರ ಮಂದಿರಕೆ** (*ಅಗ್ನಿಹಂಸ*)

ಇಂದು ಮಲೆನಾಡಿನ ಅನೇಕರ ಮನೆ, ಮನಗಳಲ್ಲಿ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರು ಪೂಜಿಸಲ್ಪಡುತ್ತಿದ್ದರೆ, ಅದಕ್ಕೆ ಮೂಲಸ್ಫೂರ್ತಿ ಕುವೆಂಪು ಅವರೇ.

'ಸ್ವಾಮಿ ವಿವೇಕಾನಂದ' – ಇದು ಕುವೆಂಪುರವರು ಬರೆದ 'ಮೇರುಸಂನ್ಯಾಸಿ'ಯ ಜೀವನಚರಿತ್ರೆ; ಕರ್ನಾಟಕದ ಶ್ರೀಸಾಮಾನ್ಯರಿಗೆ, ಅದರಲ್ಲೂ ಯುವಜನತೆಗೆ ದಾರಿದೀಪವಾಗಿರುವ, ಸ್ಫೂರ್ತಿ ನೀಡುವ ಅಪೂರ್ವಗ್ರಂಥ; ಹಲವು ಸಹಸ್ರ ಚೇತನಗಳ ದಿವ್ಯ ಸ್ಪಂದನಕ್ಕೆ ಕಾರಣವಾದ ದಿವ್ಯ ಗ್ರಂಥ.

ಸ್ವಾಮಿ ವಿವೇಕಾನಂದರ ಜೀವನ, ಉಪನ್ಯಾಸಗಳು ಕುವೆಂಪುರವರ ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿದ್ದವು. ಕವಿಚೇತನ ತನ್ನ ಹೃದಯವನ್ನು ತೆರೆದು, ಆ ಶಕ್ತಿಯನ್ನು ತನ್ನ ಹೃದಯ ದೇಗುಲಕ್ಕೆ ಆಹ್ವಾನಿಸಿ, ಆರಾಧಿಸಿ ಪ್ರಾರ್ಥಿಸಿತು, ಉಪಾಸಿಸಿತು.

ಭಾರತಾಂಬೆಯ ಕೀರ್ತಿಕೇತನವನ್ನು ಗಗನಕ್ಕೆತ್ತಿದವರು ಸ್ವಾಮಿ ವಿವೇಕಾನಂದರು. ಅವರ ದೇಶಭಕ್ತಿ, ಸಾಮಾಜಿಕ ಕಳಕಳಿ – ಒಟ್ಟಾಗಿ ಹೇಳುವುದಾದರೆ ವಿವೇಕಾನಂದರ ಹಲವಾರು ವಿಚಾರಗಳು ಕುವೆಂಪುರವರ ಸಾಹಿತ್ಯದಲ್ಲಿ ಅನುರಣನಗೊಂಡವು.

'ಸೇವೆ' ಎಂಬ ಪದಕ್ಕೆ ವಿಶಾಲ ಅರ್ಥ ಕೊಟ್ಟವರು ವಿವೇಕಾನಂದರು. ಇದರ ಬಗ್ಗೆ ಅವರ ಕೆಲವು ಭಾವನೆಗಳು ಹೀಗಿವೆ: ಪ್ರತಿಯೊಬ್ಬನಲ್ಲಿಯೂ ದೇವರಿದ್ದಾನೆ. ನರರೂಪಿ ನಾರಾಯಣನ ಸೇವೆ ಮಾಡುವವನು ಖಂಡಿತವಾಗಿಯೂ ದೇವರ ಸೇವೆಯನ್ನೇ ಮಾಡುತ್ತಾನೆ. ಜನನಿ ಮಾತೃಭೂಮಿಯೇ ನಮ್ಮ ಆರಾಧನೆಯ ಇಷ್ಟದೈವವಾಗಬೇಕು. ಭಾರತಾಂಬೆಯೆ ನಮ್ಮ ದೇವರಾಗಲಿ! ದರಿದ್ರ, ದೀನ, ಅನಾಥ ಭಾರತೀಯರು ನಮ್ಮ ಸಹೋದರರು. ನಿಮ್ಮ ದೇವ ದೇವತೆಗಳನ್ನೆಲ್ಲಾ ಮನಸ್ಸಿನಿಂದ ತಳ್ಳಿಬಿಡಿ. ಸ್ವಾಮಿ ವಿವೇಕಾನಂದರ ಈ 'ಸಮುದ್ರ ಘೋಷ ಸ್ಪರ್ಧಿಯಾದ ವೀರವಾಣಿ' ಕುವೆಂಪುರವರಲ್ಲಿ ಧೀರ ಗಂಭೀರ ಕವನವಾಗಿ ಹೊರಹೊಮ್ಮಿತು:

**ಗುಡಿಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ**
**ಬಡತನವ ಬುಡಮಟ್ಟ ಕೀಳಬನ್ನಿ**
**ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ**
**ವಿಜ್ಞಾನ ದೀವಿಗೆಯ ಹಿಡಿಯಬನ್ನಿ**
**ನೂರು ದೇವರನ್ನೆಲ್ಲ ನೂಕಾಚೆ ದೂರ**
**ಭಾರತಾಂಬೆಯೆ ದೇವಿ ನಮಗಿಂದು, ಪೂಜಿಸುವ ಬಾರ**

(*ಪಾಂಚಜನ್ಯ*)

ರಾಷ್ಟ್ರೀಯತೆಯ ಕಲ್ಪನೆಗೆ ವಿಶಾಲವಾದ ಅರ್ಥಕೊಟ್ಟ ಸ್ವಾಮಿ ವಿವೇಕಾನಂದರು, ಭಾರತೀಯ ಆಧ್ಯಾತ್ಮಿಕ ಚಿಂತನೆಗಳು ವೈಜ್ಞಾನಿಕ ತಳಹದಿಯ ಮೇಲೆ ನಿಂತಿವೆಯೆಂಬುದನ್ನು ಪ್ರತಿಪಾದಿಸಿದರು. ಭಾರತದ ಬೆಳವಣಿಗೆಗೆ ವೈಜ್ಞಾನಿಕ ಮನೋಭಾವ ಪೂರಕ ಎಂಬುದು ವಿವೇಕಾನಂದರ ನಂಬುಗೆಯಾಗಿತ್ತು.